ದಿನಾಂಕಃ **20.12.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎಮ್ ಬಿ ವಕೀಲರಿಂದಃ

**1.** ನನ್ನ ಮಾವ ಸಿದ್ದಯ್ಯ ಅವರು ಮೈಸೂರಿನ ಶಸಸ್ತ್ರ ಪಡೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ಸಿದ್ದಯ್ಯ ಅವರು ತಮ್ಮ ಜೀವಿತ ಕಾಲದಲ್ಲಿ ಅವರಿಗೆ ಶಿವಕುಮಾರಿ ಹಾಗೂ ಶಿವರಾಜು ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ಸರಿ. ಸದರಿ ಶಿವಕುಮಾರಿ ಅವರನ್ನು ನಾನು ಮದುವೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ಸದರಿ ಸಿದ್ದಯ್ಯ ಮೂಲತಃ ಎಲಚನಹಳ್ಳಿ ಗ್ರಾಮದವರು ಎಂದರೆ ಸರಿ.

**2.** ನನಗೆ ಮತ್ತು ಶಿವಕುಮಾರಿ ಅವರಿಗೆ **1.** ಪ್ರೇಮ್ ಕುಮಾರ್, **2.**ಶಿವಕುಮಾರ್, **3.** ಶಿವರಾಜು , **4.** ಪೂರ್ಣಿಮಾ ಹಾಗೂ **5.** ಚಂದ್ರಕಲಾ ಎಂಬ **5** ಜನ ಮಕ್ಕಳು ಎಂದರೆ ಸರಿ. **3** ನೇ ವಾದಿ ರವಿ ನನ್ನ ಅಳಿಯ ಎಂದರೆ ಸರಿ.

**3.** ಸಿದ್ದಯ್ಯ ಅವರ ಅಕ್ಕನ ಹೆಸರು ಬೋರಮ್ಮ ಎಂದರೆ ಸರಿ. ಸದರಿ ಬೋರಮ್ಮ ಅವರಿಗೆ ಮಾದೇವಯ್ಯ ಎಂಬ ಮಗ ಇದ್ದರು ಎಂದರೆ ಸರಿ.

ಬೋರಮ್ಮನ ಮಗ ಮಾದೇವಯ್ಯನ ಮಗಳು ಪಾರ್ವತಿ ಎಂದರೆ ಸರಿ. ಸದರಿ ಪಾರ್ವತಿ ಅವರು **2** ನೇ ವಾದಿ ರೇವಣ್ಣ ಅವರ ಹೆಂಡತಿ ಎಂದರೆ ಸರಿ.

**4.** ಸಿದ್ದಯ್ಯ ಅವರಿಗೆ ಎಲಚನಹಳ್ಳಿ ಗ್ರಾಮದ ಸರ್ವೇ ನಂ. **16/1** ರಲ್ಲಿ **6** ಎಕರೆ **16** ಗುಂಟೆ ಜಮೀನಿತ್ತು ಎಂದರೆ ಸರಿ. ಸದರಿ ಆಸ್ತಿಯ ಆರ್.ಟಿ.ಸಿ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಿ, ಇದು ರ್ವೇ ನಂ. **16/1** ರಲ್ಲಿ **6** ಎಕರೆ **16** ಗುಂಟೆ ಜಮೀನಿನ ಆರ್.ಟಿ.ಸಿ ದೃಡೀಕೃತ ನಕಲಾಗಿರುತ್ತದೆ ಎಂದರೆ ಈ ಬಗ್ಗೆ ನನಗೆ ಅನುಮಾನ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಜಮೀನನ್ನು ಪಿ. ಸುರೇಶ್ ಬಾಬು ಅವರಿಗೆ ದಿಃ**22.04.1987** ರಲ್ಲಿ ಸಿದ್ದಯ್ಯ ಅವರು ಮಾರಾಟ ಮಾಡಿದ್ದರು ಎಂದರೆ ಸರಿ. ಅದನ್ನು ಸಿದ್ದರಾಜು , ನನ್ನ ಹೆಂಡತಿ ಸೇರಿ ಪಿ ಟಿ ಸಿ ಎಲ್ ಕಾಯ್ದೆ ಯಡಿ ಮಾನ್ಯ ಎ ಸಿ ಅವರ ಮುಂದೆ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಸದರಿ ಜಮೀನನ್ನು ಸಿದ್ದಯ್ಯ ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿದ್ದರು ನಾನು ತಿಳಿದುಕೊಂಡಿಲ್ಲ.

**5.** ಸಿದ್ದಯ್ಯ ಅವರಿಗೆ ಕುಡಿಯುವ, ಜೂಜು ಆಡುವ ಹಾಗೂ ಬೇರೆ ತರಹದ ಚಟಗಳು ಇದ್ದವು ಎಂದರೆ ಸರಿ. ದಿಃ **02.01.2007** ರಲ್ಲಿ ಮಾನ್ಯ ಉಪವಿಭಾಗಾಧಿಕಾರಿಗಳು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಜೀವಂತವಿದ್ದರು ಎಂದರೆ ಸರಿಯಲ್ಲ.

**6.** ಸಿದ್ದಯ್ಯರವರು ಜ್ಯೋತಿನಗರದಲ್ಲಿ ವಾಸವಿದ್ದರು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ **1** ನೇ ವಾದಿ ನಿಂಗಮ್ಮ ನನ್ನ ಚಿಕ್ಕತ್ತೆ ಎಂದು ನಮೂದು

ಮಾಡಿರುತ್ತೇನೆ ಎಂದರೆ ಸರಿ. ಸದರಿ ನಿಂಗಮ್ಮ ತನ್ನ ಮಗಳನ್ನು ನನಗೆ ಕೊಟ್ಟಿದ್ದರಿಂದ ನನಗೆ ಬೀಗತಿ ಆಗಬೇಕು ಆ ರೀತಿ ನಾನು ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ . ನನಗೆ ಮಗಳು ಕೊಡುವ ಮೊದಲು **1** ನೇ ವಾದಿ ನಿಂಗಮ್ಮ ನನಗೆ ಸಂಬಂಧಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸಂಬಂಧಿಕರು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ. ಅದಕ್ಕೆ ಯಾವ ದಾಖಲಾತಿ ಇರುತ್ತದೆ ಎಂದು ಸಾಕ್ಷಿ ವಕೀಲರಿಗೆ ಪ್ರಶ್ನೆ ಮಾಡುತ್ತಾರೆ.

**7.** ಜ್ಯೋತಿನಗರ ಮತ್ತು ಭುಗತಗಳ್ಳಿ **5-6** ಕಿ.ಮೀ.ಅಂತರದಲ್ಲಿವೆ. ನಾವು ಕೂಡ ಜ್ಯೋತಿನಗರದಲ್ಲಿಯೆ ವಾಸವಾಗಿದ್ದೇವು. ದಿಃ **19.04.1973** ರಲ್ಲಿ ನನ್ನ ಮದುವೆಯ ಚಪ್ಪರ ಹಾಗೂ ದಿಃ **20.04.1973** ರಲ್ಲಿ ನನ್ನ ಮದುವೆಯಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಕೆಲಸಕ್ಕೆ ಸೇರಿರಲಿಲ್ಲ. ನನ್ನ ಮದುವೆ ಏಪ್ರಿಲ್ ತಿಂಗಳಲ್ಲಿ ಆಗಿದ್ದು , ಆಗಸ್ಟ್ ತಿಂಗಳಲ್ಲಿ ನಾನು ಕೆಲಸಕ್ಕೆ ಸೇರಿರುತ್ತೇನೆ. ನಾನು **9** ನೇ ತರಗತಿ ಉತ್ತೀರ್ಣ ಹೊಂದಿರುವುದಿಲ್ಲ. ನಾನು ಡಿ.ಆರ್ ಕಾನ್ ಸ್ಟೇಬಲ್ ಆಗಿ ಕೆಲಸಕ್ಕೆ ಸೇರಿದ್ದೆ.

**8.** ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು **1** ನೇ ವಾದಿ ನನ್ನ ಚಿಕ್ಕತ್ತೆ ನಿಂಗಮ್ಮ ಮತ್ತು ನನ್ನ ಮಾವನವರಾದ ಮೈಸೂರು ಜಿಲ್ಲೆ , ಹುಣಸೂರು ತಾ, ಬಿಳಿಕೆರೆ ಹೋ, ಎಲಚನಹಳ್ಳಿ ಗ್ರಾಮದ ವಾಸಿಯಾದ ಲೇಟ್ ಚಿಕ್ಕಬೈರಯ್ಯ ಅವರ ಮಗನಾದ ಸಿದ್ದಯ್ಯ ಇವರ ವಿವಾಹವು ದಿಃ**21.06.1976** ರಂದು ಮೈಸೂರಿನ

ಜ್ಯೋತಿನಗರದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಆಗಿರುತ್ತದೆ ಎಂದು ಬರೆಸಿರುತ್ತೇನೆಂದರೆ ಸರಿ. ಆ ಸಮಯದಲ್ಲಿ ಲಗ್ನ ಕಟ್ಟಿಸಿದ್ದೇವು. ಆದರೆ ಲಗ್ನಪತ್ರಿಕೆ ಮಾಡಿಸಿರಲಿಲ್ಲ. ಲಗ್ನ ಕಟ್ಟಿಸಿದ್ದರ ಬಗ್ಗೆ ನಾನು ನೋಡಿಲ್ಲ. ಸದರಿ ವಿವಾಹಕ್ಕೆ ಸಂಬಂಧಪಟ್ಟಂತೆ ಯಾವುದೇ ಭಾವಚಿತ್ರಗಳು ಸಹ ಇಲ್ಲ. ಸಿದ್ದಯ್ಯ ಮತ್ತು ನಿಂಗಮ್ಮ ಇವರಿಗೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮದುವೆ ಆಗಿರುತ್ತದೆಂದು ತೋರಿಸಲು ಸದರಿ ದೇವಸ್ಥಾನದ ಯಾವುದೇ ದಾಖಲಾತಿಗಳು ಇಲ್ಲ. ಸದರಿ ಮದುವೆಯ ಪುರೋಹಿತ್ಯವನ್ನು ಎಲಚನಹಳ್ಳಿ ಗ್ರಾಮದ ರಾಚಯ್ಯ ಎಂಬುವವರು ಮಾಡಿರುತ್ತಾರೆ. ಜ್ಯೋತಿನಗರದಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನ ಮೈಸೂರು ಜಿಲ್ಲೆಗೆ ಸೇರಿದ್ದು , ಸದರಿ ಜ್ಯೋತಿನಗರದ ಸೇರಿರುವಂತ ಯಾವುದೇ ಪುರೋಹಿತರು ಪುರೋಹಿತ್ಯ ಮಾಡಿರುವುದಿಲ್ಲ. ಸದರಿ ಮದುವೆಗೆ ಎಲಚನಹಳ್ಳಿ ಮತ್ತು ಭುಗತಗಳ್ಳಿ ಗ್ರಾಮದ ಯಜಮಾನರುಗಳು ಮತ್ತು ನಾವುಗಳು ಸೇರಿದ್ದೇವು. ಆ ಸಮಯದಲ್ಲಿ ನಾನು ಒಬ್ಬ ಕಾನ್ ಸ್ಟೇಬಲ್ ಆಗಿದ್ದು , ಸಿದ್ದಯ್ಯ ಅವರಿಗೆ ಮೊದಲೆ ಮದುವೆ ಆಗಿರುತ್ತದೋ ಇಲ್ಲವೋ ಎಂದು ನಾನು ತಿಳಿದುಕೊಂಡಿಲ್ಲ ಈ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮದುವೆಗೆ ನಾನು ಭಾಗವಹಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಸಿದ್ದಯ್ಯ ಅವರಿಗೆ ಮೊದಲೆ ಪುಟ್ಟಗೌರಮ್ಮ ಎಂಬ ಹೆಂಡತಿ ಇದ್ದರು ಎಂದರೆ ಈ ವಿಷಯ ನನಗೆ ಇತ್ತೀಚೆಗೆ ಗೊತ್ತಾಯಿತು ಎಂದು ಹೇಳುತ್ತಾರೆ.

**9.** ಸದರಿ ಪುಟ್ಟಗೌರಮ್ಮ ಅವರಿಂದ ಸಿದ್ದಯ್ಯ ಅವರಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಸದರಿ ವಿಷಯ ನನಗೆ ಸಿದ್ದಯ್ಯ ಮತ್ತು ನಿಂಗಮ್ಮ ಇವರ ಮದುವೆಯಾದ ನಂತರ ಗೊತ್ತಾಗಿರುತ್ತದೆ.

**10.** ಸಿದ್ದಯ್ಯ ಮತ್ತು **1** ನೇ ವಾದಿ ನಿಂಗಮ್ಮ ಒಬ್ಬರಿಗೊಬ್ಬರು ಪರಿಚಯವಾಗಿ ಲಲಿತಾದ್ರಿಪುರ ಗ್ರಾಮದಲ್ಲಿ ಸಕ್ಕಹಳ್ಳಿ ರಸ್ತೆಯಲ್ಲಿರುವ ಗಾಯತ್ರಿಫಾರಂನಲ್ಲಿ ಸಿದ್ದಯ್ಯ ಅವರು ನಿಂಗಮ್ಮ ಅವರನ್ನು ಕೆಲಸಕ್ಕೆ ಸೇರಿಸಿದ್ದರು ಎಂದರೆ ಸರಿಯಲ್ಲ. **2** ರಿಂದ **4** ನೇ ವಾದಿಯರು ತಮ್ಮ ವಿದ್ಯಾಭ್ಯಾಸವನ್ನು ಮೈಸೂರು ನಗರದಲ್ಲಿಯೆ ಮಾಡಿರುತ್ತಾರೆ ಎಂದರೆ ಸರಿ.

**11.** ನನ್ನ ಹೆಂಡತಿ ಮತ್ತು ನನ್ನ ಭಾಮೈದನ ಮಕ್ಕಳು ಸೇರಿ ಎ ಸಿ ನ್ಯಾಯಾಲಯ ದಲ್ಲಿ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ನನ್ನ ಮಾವ ಸಿದ್ದಯ್ಯ ಅವರಿಗೆ ಕುಡಿತದ, ಜೂಜಿನ ಹಾಗೂ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಇದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

**12.** **2** ರಿಂದ **4** ನೇ ವಾದಿಯರು ನನ್ನ ಮಾವ ಸಿದ್ದಯ್ಯಅವರಿಗೆ ಹುಟ್ಟಿದ ಮಕ್ಕಳಾಗಿರುತ್ತಾರೆ ಎಂದರೆ ಸುಳ್ಳು. ಆದ್ದರಿಂದ ನನ್ನ ಪ್ರಮಾಣ ಪತ್ರಿಕೆಯಲ್ಲಿ ನಾನು **1** ನೇ ವಾದಿ ನಿಂಗಮ್ಮ ಅವರನ್ನು ಬೀಗರು ಎಂದು ಬರೆಸುವ ಬದಲು ನನ್ನ ಚಿಕ್ಕತ್ತೆ ಎಂದು ಬರೆಸಿರುತ್ತೇನೆಂದರೆ ಸುಳ್ಳು.

**13.** **3** ನೇ ವಾದಿ ರವಿ ನನ್ನ ಹೆಂಡತಿಯ ಸ್ವಂತ ತಮ್ಮ ಆಗಿರುವುದರಿಂದ ನನ್ನ ಮಗಳಾದ ಪೂರ್ಣಿಮಾ ಅವರನ್ನು ಕೊಟ್ಟು ಮದುವೆ ಮಾಡಿರುತ್ತೇನೆಂದರೆ ಸರಿಯಲ್ಲ. **3** ನೇ ವಾದಿ ರವಿ ನನ್ನ ಹೆಂಡತಿಯ ಚಿಕ್ಕಪ್ಪನ ಮಗನಾದ್ದರಿಂದ ಆತನಿಗೆ ನನ್ನ ಮಗಳನ್ನು ಕೊಟ್ಟ ಮದುವೆ ಮಾಡಿರುತ್ತೇನೆಂದು ಸಾಕ್ಷಿ ಹೇಳುತ್ತಾರೆ.

**14.** ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಭಾಗ ಕೊಡಬೇಕಾಗುತ್ತದೆ ಎಂದು ನಾನು ಮತ್ತು ಸಿದ್ದಮ್ಮ ಪಿಡಬ್ಲ್ಯೂ-**3** ಸೇರಿ ಪಿತೂರಿ ಮಾಡಿರುತ್ತೇವೆಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುವುದನ್ನು ನಾನು ಕರಗತ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.